ದ್ವೇಷದ ಅಮಲಿನ ಕೊನೆ ಎಲ್ಲಿಯವರೆಗೆ ಎಂಬುದನ್ನು ಮಹಾಭಾರತದ ಮೂಲ ಕತೆ ಹೇಳುತ್ತದೆ. ಅದನ್ನೇ ಪುನರುಚ್ಚರಿಸುವ ರನ್ನನ 'ಗದಾಯುದ್ಧ'ದ ಕಡೆಯ ಪದ್ಯಗಳು ಇನ್ನಷ್ಟು ಪರಿಣಾಮಕಾರಿಯಾಗಿವೆ. ದುರ್ಯೋಧನನಿಗೆ ತೊಡೆ ಮುರಿದದ್ದರ ದೈಹಿಕ ಹಾನಿ ಅಷ್ಟಾಗಿ ಕಾಡುತ್ತಿಲ್ಲ. ತಾನು ಸೋತು ನೀರಲ್ಲಿ ಮುಳುಗಿ ಎದ್ದು ಬಂದು ತಿರುಗಿ ಅಳಿದುಳಿದವರ ಮುಂದೆ ಗದಾಭಂಗಿತನಾದದ್ದರ ಮಾನಹಾನಿ ದೊಡ್ಡದಾಯಿತು. ದೈಹಿಕ ಹಾನಿಗಿಂತ ಮಾನಸಿಕ ಹಾನಿ ದೊಡ್ಡದು. ಪ್ರಾಣ ಹೋದರೂ ಮಾನ ಹೋಗಬಾರದಲ್ಲ. ಆದರೆ ಮನುಷ್ಯ ಮಾತ್ರರಿಗೆ ಯಾವಾಗಲೂ ಪ್ರಾಣ, ಮಾನ ಎರಡನ್ನೂ ಉಳಿಸಿಕೊಳ್ಳುವ ಸಾಧ್ಯತೆ ಇದ್ದೇ ಇದೆ. ಅದರ ಅರಿವು ಇಲ್ಲದೆಯೇ ಪರಾಕ್ರಮಿಗಳು ಮಾನ, ಪ್ರಾಣ ಕಳೆದುಕೊಂಡು, ನಂಬಿದವರನ್ನು ನರಕಕ್ಕೆ ಕಳಿಸಿದರು. ಹೆಂಗಸರನ್ನು ಬೆಂಕಿಗೆ ತಳ್ಳಿಸಿದರು.

ದುರ್ಯೋಧನನಿಗೆ ಕಡೆಯದಾಗಿ ಕುಂತೀಪುತ್ರರ ತರಿದ ತಲೆಗಳನ್ನು ನೋಡುವಂತಾಯಿತು. ಈ ದ್ವೇಷವನ್ನು ತೋಡಿಕೊಂಡದ್ದು ಅಶ್ವತ್ಥಾಮನಲ್ಲಿ. ವ್ಯಾಸ ಮಹಾಕವಿ ಈ ಹೀನ ಕೃತ್ಯವನ್ನು ಅಶ್ವತ್ಥಾಮನಿಂದಲೇ ಯಾಕೆ ಮಾಡಿಸುತ್ತಾರೆ ಎಂದರೆ, ಯುದ್ಧೋನ್ಮಾದದ ಪಾಪ ಎಲ್ಲಿಯವರೆಗೆ, ಯಾರವರೆಗೆ ಹೋಗಿ ನಿಲ್ಲುತ್ತದೆ ಎಂಬುದನ್ನು ನಿರೂಪಿಸುವುದಕ್ಕಾಗಿ. ಕಡೆಗೆ ಗುರುಪುತ್ರ ಅಶ್ವತ್ಥಾಮ ತಂದದ್ದು ಪಾಂಡವರ ಶಿಶುಗಳ ತಲೆಯನ್ನು! ಎಲ್ಲರೂ ಮನುಷ್ಯರೇ. ಆ ಮನುಷ್ಯ ಹೃದಯದ ಮೂಲೆಯಲ್ಲಿ ಕರುಣೆ, ಕನಿಕರಕ್ಕೆ ಅವಕಾಶವಿದ್ದೇ ಇರುತ್ತದೆ ಎಂಬುದನ್ನು ಬಲ್ಲ ರನ್ನ ಅದೇ ದುರ್ಯೋಧನನಿಂದ ಹೇಳಿಸುವ ಮಾತು–

*ಪರಮೇಶ್ವರಾವತಾರನೆ*
*ಪರಮಜ್ಞಾನಿಯೆ ವಿವೇಕವಿಕಳರವೊಲ್ ಬಾ*
*ಲರ ತಲೆಯನರಿದು ತಂದೆಯೋ*
*ದೊರೆಕೊಂಡುದು ನಿನಗೆ ಪಾತಕಂ ಬಾಲವಧಂ* – ಎಂದಿದೆ.

ಧರ್ಮಶಾಸ್ತ್ರಗಳು ಶಿಶುಹತ್ಯೆಯನ್ನು ಮಹಾಪಾಪ, ಅದು ನಿಷಿದ್ಧವೆಂದು ಹೇಳಿರುವಲ್ಲಿ, ಇದಕ್ಕೆ ತದ್ವಿರುದ್ಧವಾಗಿ ಅಶ್ವತ್ಥಾಮನಂಥ ದ್ವಿಜನು ತಾನೇ ಕೈಯಾರೆ ಶಿಶುಹತ್ಯೆ ಮಾಡಿದ್ದಾನೆ. ಇದು ಕುರುಕ್ಷೇತ್ರ ಯುದ್ಧದ ಪಾಪಕೃತ್ಯದ ತುದಿ. ಇಂಥದ್ದೇ ಒಂದು ಚಿತ್ರಣ ಪಿರಿಯಾಪಟ್ಟಣದ ಕಾಳಗ ಜನಪದ ಕಥನದಲ್ಲಿ ಬರುತ್ತದೆ. ನಾಳಿನ ಯುದ್ಧದಲ್ಲಿ ಸಾಯುವ ವೀರರಾಜು ಮೊದಲು ಮಕ್ಕಳನ್ನು ಕೊಂದು ತದನಂತರ ಮೂವರು ಹೆಂಡತಿಯರನ್ನು ಕೊಲ್ಲ ಹೋದರೆ, ಒಬ್ಬ ಹೆಂಡತಿ ಮೊದಲು ನನ್ನನ್ನು ಕೊಂದು, ಆಮೇಲೆ ಮಕ್ಕಳ ಶಿರ ಹರಿ ಎಂದಳಂತೆ. ಈ ಬಗೆಯ ಹತ್ಯೆಯಿಂದ ನರ ಮನುಷ್ಯನು ಬದುಕಿ ಉಳಿಯಲು ಸಾಧ್ಯವೇ?

ಅಶ್ವತ್ಥಾಮ ಶಾಪಗ್ರಸ್ತನಾಗಿ ಹಿಮಾಲಯದ ಕಡೆಗೆ ಮತಿವಿಕಲನಾಗಿ ನಡೆಯುತ್ತ ಹಸ್ತಿನಾಪುರಕ್ಕೆ ಬಂದ. ಅಲ್ಲಿ ಬದುಕಿದ್ದವರು ವಿಧವೆಯರು, ಕುಂಟರು, ಕುರುಡರು, ಮುದುಕರು. ಯುದ್ಧ ಮಾಡಲಾಗದೇ ಬದುಕುಳಿದು ಬಂದವರು. ಹೀಗೆ ಎಷ್ಟೋ ವರ್ಷಗಳ ಕಾಲ ಅಶ್ವತ್ಥಾಮ ಮತಿಭ್ರಮಣೆಯಿಂದ ಬದುಕಿದನೆಂದರೆ ಅರ್ಥವೇನು? ಎಲ್ಲ ಕಾಲಕ್ಕೂ ಯುದ್ಧೋನ್ಮಾದಿ ಮತಿವಿಕಲರು ಇದ್ದೇ ಇರುತ್ತಾರೆ. ಆಶ್ಚರ್ಯವೆಂದರೆ ಕುಮಾರವ್ಯಾಸನಿಗೂ, ಅಶ್ವತ್ಥಾಮನಿಗೂ ದಂತಕಥೆಯೊಂದು ತಗುಲಿಕೊಂಡಿದೆ. ಅಶ್ವತ್ಥಾಮ ಅಲೆಯುತ್ತಾ ಧರ್ಮಶಾಲೆಯೊಂದರ ಕಡೆ